## ನಿಮ್ಮೊಡನೆ

# ಅಮೃತವಾಹಿನಿಯೊಂದು ಹರಿಯುತಿರಲಿ ಮಾನವನ ಎದೆಯಿಂದ ಎದೆಗೆ ಸತತ

ಜನಸಾಮಾನ್ಯರ ಬದುಕನ್ನು ಹಸನು ಮಾಡುವಲ್ಲಿ ಸೋತ ರಾಜಕಾರಣಿಗಳು, ತಮ್ಮ ವೈಫಲ್ಯವನ್ನು ಮುಚ್ಚಿಕೊಳ್ಳಲೋಸುಗ ಇತಿಹಾಸ–ಪುರಾಣಗಳ ಪಾತ್ರಗಳಿಗೆ ಜೀವ ತುಂಬುತ್ತಾ ನಾಟಕ ಸೃಷ್ಟಿಸುತ್ತಿದ್ದಾರೆ. ಬದುಕಿನ ಆತ್ಯಂತಿಕ ತುರ್ತುಗಳನ್ನು ಮರೆತು ನಾಟಕಗಳಲ್ಲಿ ನಾವೂ ಪಾತ್ರಗಳಾಗುತ್ತಿರುವುದು; ಚರಿತ್ರೆ, ಪುರಾಣಗಳ ಹತಾರಗಳನ್ನು ಮೆರೆಸುತ್ತಿರುವುದು.

ಚರಿತ್ರೆ–ಪುರಾಣಗಳ ಬಗ್ಗೆ ಜನಸಾಮಾನ್ಯರು ಅತ್ಯಂತ ಸೂಕ್ಷ್ಮರಾಗಿರುವ ಕಾಲಘಟ್ಟವಿದು. ಶತಮಾನಗಳ ಹಿಂದಿನ ಘಟನೆಗಳು ಹಾಗೂ ಪುರಾಣದ ಮೂರ್ತಿಗಳನ್ನು ವರ್ತಮಾನದಲ್ಲಿ ಕೆದಕಲಾಗುತ್ತಿದೆ. ಹೀಗೆ ಹಿಂತಿರುಗಿ ನೋಡುವ ಹಾಗೂ ದೇಶ–ಕಾಲಗಳನ್ನು ವಿಶ್ಲೇಷಿಸುವ ಕುತೂಹಲ ಮನುಷ್ಯಸಹಜವಾದುದು; ಅದು ಸ್ವಾಗತಾರ್ಹ ಕೂಡ. ಆದರೆ, ಹೀಗೆ ಹುತ್ತ ಕೆದಕುವ ಸಂದರ್ಭದಲ್ಲಿ ಧುತ್ತೆಂದು ಎದುರು ನಿಲ್ಲುವ ಆಕೃತಿ–ಸಂಗತಿಗಳನ್ನು ಹೇಗೆ ಅರ್ಥೈಸಿಕೊಳ್ಳುತ್ತೇವೆ ಎನ್ನುವುದು ಪರಿಣಾಮದ ದೃಷ್ಟಿಯಿಂದ ಮುಖ್ಯವಾದುದು. ಕೆಲವೊಮ್ಮೆ, ಇತಿಹಾಸದ ಘಟನೆಗಳನ್ನು ಆಯಾ ಕಾಲಘಟ್ಟದೊಂದಿಗೆ ಇಟ್ಟು ನೋಡುವಷ್ಟಕ್ಕೆ ನಮ್ಮ ಚಾರಿತ್ರಿಕ ಕುತೂಹಲ ತಣಿಯಬೇಕು. ಎಂದಿನದೋ ಘಟನೆಗಳನ್ನು ವರ್ತಮಾನದ ಹಿನ್ನೆಲೆಯಲ್ಲಿ ಅರ್ಥ ಮಾಡಿಕೊಳ್ಳಲು ಯತ್ನಿಸಿದರೆ ಅಥವಾ ಭೂತದ ಸಿಕ್ಕುಗಳನ್ನು ವರ್ತಮಾನದಲ್ಲಿ ಪರಿಹರಿಸಿಕೊಳ್ಳಲು ಹೊರಟರೆ ಸಮಸ್ಯೆಗಳು ಶುರುವಾಗುತ್ತವೆ. ಅಷ್ಟುಮಾತ್ರವಲ್ಲ, ಚರಿತ್ರೆ–ಪುರಾಣದ ಸಂಗತಿಗಳು ಮತ್ತೆ ಜೀವಗೊಂಡು ವರ್ತಮಾನವನ್ನು ವಿಷಮಯಗೊಳಿಸತೊಡಗುತ್ತವೆ.

ರಾಜನೊಬ್ಬನ ಆಡಳಿತದ ಆಗುಹೋಗುಗಳು, ಧಾರ್ಮಿಕ ನಿಲುವುಗಳು ಹಾಗೂ ಯುದ್ಧಗಳ ಕುರಿತು ವರ್ತಮಾನದಲ್ಲಿ ಚರ್ಚಿಸುತ್ತೇವೆ. ಪುರಾಣದ ಪುರುಷೋತ್ತಮನನ್ನು ಪ್ರತಿಷ್ಠೆಯ ಸಂಕೇತವಾಗಿಸಿಕೊಂಡು ಹೊಸ ಸಂಕಥನಗಳನ್ನು ಕಟ್ಟುತ್ತೇವೆ. ದೇಶದ ವಿಭಜನೆಯ ಕಥೆಗಳನ್ನು ಭಾವುಕತೆಯಿಂದ ನೆನಪಿಸಿಕೊಳ್ಳುತ್ತೇವೆ. ಇದೆಲ್ಲದರ ಪರಿಣಾಮಗಳೇನು? ಈವರೆಗಿನ ಇತಿಹಾಸ ಸರಿಯಿಲ್ಲ, ಬದಲಾಯಿಸೋಣ ಎನ್ನುತ್ತೇವೆ. ದೇಶ ಒಡೆದ ಕಥನಗಳ ನೆನಪಿನಲ್ಲಿ, ಮನಸ್ಸುಗಳನ್ನು ಚೂರಾಗಿಸತೊಡಗುತ್ತೇವೆ. ಧರ್ಮಗಳ ನಡುವಿನ ಗೋಡೆಗಳು ಮತ್ತಷ್ಟು ಎತ್ತರವಾಗುತ್ತಾ ಹೋಗುತ್ತವೆ. ಇವೆಲ್ಲವನ್ನು ನೋಡಿದರೆ ನಾವು ಹುತ್ತ ಅಗೆದು ತೆಗೆದದ್ದಾದರೂ ಏನು? ವ್ಯಕ್ತಿ–ಸಮುದಾಯ–ದೇಶಗಳ ನಡುವೆ ಬಿರುಕು ಉಂಟಾಗುವುದಾದರೆ ಅಂಥ ಚರಿತ್ರೆಯೋ ಪುರಾಣವೋ ನಮಗೆ ಯಾಕೆ ಬೇಕು?

ನಮ್ಮ ಪರಂಪರೆಯ ಭಾಗವಾದ ಇವೆರಡನ್ನೂ ಇತಿಹಾಸ ಮತ್ತು ಪುರಾಣಗಳನ್ನು ನಿರಾಕರಿಸುವುದು ಅಥವಾ ನಿರ್ಲಕ್ಷಿಸುವುದು ಸಾಧ್ಯವಿಲ್ಲ. ಆದರೆ, ಕಳೆದುಹೋದ ಸಂಗತಿಗಳನ್ನು ವರ್ತಮಾನದಲ್ಲಿ ಸರಿಪಡಿಸಲು ಹೊರಡುವುದು ಅನಗತ್ಯ ಸಮಸ್ಯೆಗಳಿಗೆ ಕಾರಣವಾಗುತ್ತದೆ ಎನ್ನುವ ವಿವೇಕ ನಮ್ಮದಾಗಿರಬೇಕು. ಅಪ್ರಿಯ ಸತ್ಯಗಳನ್ನು ಸ್ವೀಕರಿಸುವ ಮನೋಭಾವವೂ ಅಗತ್ಯ. ಇಲ್ಲದೆ, ಹೋದರೆ ಬದುಕಿನ ಚೆಲುವನ್ನು ಹೆಚ್ಚಿಸಿಕೊಳ್ಳಲು ಕೈದೀವಿಗೆಗಳಾಗಬೇಕಾದ ಚರಿತ್ರೆ–ಪುರಾಣಗಳು, ಅದೇ ಬದುಕನ್ನು ವಿರೂಪಗೊಳಿಸತೊಡಗುತ್ತವೆ. ಹಿನ್ನೋಟದ ದರ್ಶನ ವೈಯಕ್ತಿಕ ಹಾಗೂ ಸಾಮುದಾಯಿಕ ನೆಲೆಯಲ್ಲಿ ರಚನಾತ್ಮಕ ಬದಲಾವಣೆಗಳಿಗೆ ಕಾರಣವಾಗದೆ ಹೋದರೆ, ನಮ್ಮ ನೋಟದಲ್ಲಿಯೇ ಏನೋ ಐಬಿದೆ ಎಂದರ್ಥ.

ಹಾಗೆ ನೋಡಿದರೆ, ಇತಿಹಾಸ–ಪುರಾಣಗಳ ಬಗ್ಗೆ ತಲೆಕೆಡಿಸಿಕೊಳ್ಳಲು ಸಾಧ್ಯವಾಗದಷ್ಟು ತೀಕ್ಷ್ಣವಾದ ವರ್ತಮಾನದಲ್ಲಿ ನಾವು ಬದುಕುತ್ತಿದ್ದೇವೆ. ಕರ್ನಾಟಕದ ಈ ಹೊತ್ತಿನ ಸಂಕಟಗಳನ್ನೇ ನೋಡಿ. ಉತ್ತರ ಕರ್ನಾಟಕ ಭಾಗದಲ್ಲಿ ನೆರೆ ತರಿಸಿದ ಕಣ್ಣೀರು ಇನ್ನೂ ಒದ್ದೆಯಾಗಿಯೇ ಇದೆ. ಇನ್ನೊಂದು ಕಡೆ ಬಯಲುಸೀಮೆಯ ಅನೇಕ ತಾಲ್ಲೂಕುಗಳು ಬರದ ದವಡೆಗೆ ಸಿಲುಕಿವೆ. ರೈತರ ಪಾಲಿಗೆ ನೆಮ್ಮದಿಯ ದಿನಗಳು ಮರೀಚಿಕೆಯಾಗಿಯೇ ಇವೆ. ದೇಶದಲ್ಲಿ ಹಸಿದ ಹೊಟ್ಟೆಗಳ ಸಂಖ್ಯೆ ಹೆಚ್ಚುತ್ತಲೇ ಇದೆ. ಅಪೌಷ್ಟಿಕತೆಯಿಂದ ಬಳಲುವ ಮಹಿಳೆಯರು–ಮಕ್ಕಳ ಸಂಖ್ಯೆ ದಿಗಿಲುಂಟಾಗುವಷ್ಟು ದೊಡ್ಡದಿದೆ. ಸಾಮಾಜಿಕವಾಗಿ ಮಾತ್ರವಲ್ಲ, 'ಸಾಂಸ್ಕೃತಿಕ ಕರ್ನಾಟಕ' ಕೂಡ ಬಸವಳಿದಿದೆ. ವಾಸ್ತವ ಹೀಗಿರುವಾಗ ಇತಿಹಾಸದ ಪಠ್ಯಗಳಿಂದ ರಾಜನೊಬ್ಬನ ಕಥನವನ್ನು ತೆಗೆಯೋಬೇಕೋ ಬೇಡವೋ ಎನ್ನುವ ಪ್ರಶ್ನೆ ನಮಗೆ ಯಾಕಷ್ಟು ಮುಖ್ಯವಾಗಬೇಕು? ಮಂದಿರ ಅಥವಾ ಮಸೀದಿಯ ಅಸ್ತಿತ್ವದ ಪ್ರಶ್ನೆ ಸಮುದಾಯಗಳ ನಡುವೆ ಯಾಕೆ ಬಿರುಕುಂಟು ಮಾಡಬೇಕು? ಸೂಕ್ಷ್ಮವಾಗಿ ನೋಡಿದರೆ, ಇವೆಲ್ಲವೂ ಜನಸಾಮಾನ್ಯರ ಆದ್ಯತೆಗಳಲ್ಲವೇ ಅಲ್ಲ. ಇದೆಲ್ಲ ರಾಜಕಾರಣಿಗಳ ಸೃಷ್ಟಿ. ಜನಸಾಮಾನ್ಯರ ಬದುಕನ್ನು ಹಸನು ಮಾಡುವಲ್ಲಿ ಸೋತ ರಾಜಕಾರಣಿಗಳು, ತಮ್ಮ ವೈಫಲ್ಯವನ್ನು ಮುಚ್ಚಿಕೊಳ್ಳಲೋಸುಗ ಇತಿಹಾಸ–ಪುರಾಣಗಳ ಪಾತ್ರಗಳಿಗೆ ಜೀವ ತುಂಬುತ್ತಾ ನಾಟಕ ಸೃಷ್ಟಿಸುತ್ತಿದ್ದಾರೆ. ವಿಪರ್ಯಾಸವೆಂದರೆ, ಬದುಕಿನ ಆತ್ಯಂತಿಕ ತುರ್ತುಗಳನ್ನು ಮರೆತು ನಾಟಕಗಳಲ್ಲಿ ನಾವೂ ಪಾತ್ರಗಳಾಗುತ್ತಿರುವುದು; ಚರಿತ್ರೆ, ಪುರಾಣಗಳ ಹತಾರಗಳನ್ನು ಮೆರೆಸುತ್ತಿರುವುದು.

ಒಣಹೆಮ್ಮೆಯ ಅಥವಾ ಭಾವಾವೇಶದ ಮಾತುಗಳು ಹೊಟ್ಟೆ ತುಂಬಿಸುವುದಿಲ್ಲ ಎನ್ನುವ ಕಟು ವಾಸ್ತವ ನಮ್ಮೆಲ್ಲರಿಗೂ ಅರ್ಥವಾಗಬೇಕಾಗಿದೆ. ಗತಕಾಲವನ್ನು ಚರಿತ್ರಕಾರರ ಪಾಲಿಗೆ ಬಿಡೋಣ. ಅವರು ಪಠ್ಯಗಳನ್ನು ಬರೆದುಕೊಳ್ಳಲಿ ಅಥವಾ ಬದಲಿಸಿಕೊಳ್ಳಲಿ. ಅದರಲ್ಲಿ ಜನಸಾಮಾನ್ಯರು ಅಥವಾ ಸರ್ಕಾರ ಮೂಗು ತೂರಿಸುವುದು ಬೇಡ. ನಾವು ನಮ್ಮ ಮನೆ–ಮಾರು ನೋಡಿಕೊಳ್ಳುವ, ಸಮಸ್ಯೆಗಳನ್ನು ಸರಿಪಡಿಸಿಕೊಳ್ಳುವ ಸಂದರ್ಭ ಇಂದಿನದು. ವರ್ತಮಾನದ ತವಕತಲ್ಲಣಗಳನ್ನು ಮೊದಲು ತಿಳಿಗೊಳಿಸಿಕೊಳ್ಳೋಣ. ತದನಂತರವೂ ಸಮಯ ಸಿಗುವುದಾದರೆ, ಚರಿತ್ರೆ–ಪುರಾಣದ ಬಗ್ಗೆ ತಲೆಕೆಡಿಸಿಕೊಳ್ಳೋಣ.


ಈಶ್ವರ್

■ ರಘುನಾಥ ಚ.ಹ.